# ಮಂತ್ರದ ಖಡ್ಗ

ಅದೊಂದು ದಟ್ಟವಾದ ಅರಣ್ಯ. ಅಲ್ಲಿ ಗುಹೆಯೊಂದರಲ್ಲಿ ರಾಕ್ಷಸನೊಬ್ಬನಿದ್ದ. ಆ ಕಾಡಿನ ಮಾರ್ಗವಾಗಿ ಸಂಚರಿಸುತ್ತಿದ್ದ ಮಾನವರನ್ನು, ಸಾಕು ಪ್ರಾಣಿಗಳನ್ನು ಕೊಂದು ತಿನ್ನುತ್ತಾ ಜೀವಿಸಿದ್ದ. ಹೀಗಾಗಿ ಆ ಕಾಡಿನತ್ತ ಯಾರೂ ಹೋಗುತ್ತಿರಲಿಲ್ಲ. ಆದರೂ ಆ ರಾಕ್ಷಸ ಸುತ್ತಮುತ್ತ ಅಲೆದಾಡಿ ಸಿಕ್ಕ ಜನರನ್ನು ಕಬಳಿಸತೊಡಗಿದ. ಇದರಿಂದ ಅಲ್ಲಿಯ ಊರ ಜನರೂ ಭಯದಿಂದ ಜೀವಿಸುತ್ತಿದ್ದರು. ಎಷ್ಟು ದಿನ ತಾನೇ ಹೀಗೆ ಪ್ರಾಣ ಕೈಯಲ್ಲಿ ಹಿಡಿದುಕೊಂಡು ಬಾಳಲು ಸಾಧ್ಯ? ಇದಕ್ಕೊಂದು ಪರಿಹಾರ ಕಂಡುಕೊಳ್ಳಲು ಊರ ಜನ, ಮುಖಂಡರು ಸಭೆ ಸೇರಿದರು.

ಊರಿನ ಮುಖಂಡ 'ನನ್ನ ಬಾಂಧವರೇ, ಆ ರಾಕ್ಷಸನ ಹಾವಳಿಯಿಂದಾಗಿ ನಾವೆಲ್ಲಾ ನೆಮ್ಮದಿಯಿಂದ ಬಾಳದಂತಾಗಿದೆ. ಈ ಸಂಕಷ್ಟದಿಂದ ಪಾರಾಗೋ ಉಪಾಯ ಯಾರಿಗಾದ್ರು ತಿಳಿದಿದ್ರೆ ಹೇಳಿ.' ಎಂದ.

ಆಗ ಆ ಸಭೆಯಲ್ಲಿ ಮುದುಕನೊಬ್ಬ ಎದ್ದು ನಿಂತು ಹೇಳಿದ 'ನರ ರಾಕ್ಷಸನನ್ನು ಸಂಹರಿಸದಿದ್ರೆ ನಮ್ಮ ಊರಿಗೆ ಉಳಿಗಾಲವಿಲ್ಲ! ಆ ಮಾಯಾವಿ ರಾಕ್ಷಸನನ್ನು ಕೊಲ್ಲಬೇಕೆಂದ್ರೆ ನದಿ ದಾಟಿ ಕಾಡಿನಲ್ಲಿ ಒಬ್ಬ ಮಹಾತಪಸ್ವಿಯಲ್ಲಿಗೆ ಹೋದ್ರೆ ಇದಕ್ಕೊಂದು ಪರಿಹಾರ ಸಿಗಬಹುದು. ಆದರೆ ಅದು ಸುಲಭದ ಮಾತಲ್ಲ. ಏಕೆಂದ್ರೆ ರಾಕ್ಷಸನ ಗುಹೆಯನ್ನು ದಾಟಿಯೇ ಹೋಗ್ಬೇಕು, ಅಂಥಾ ಧೈರ್ಯಶಾಲಿ ಯಾರಿದ್ದಾರೆ ನಮ್ಮಲ್ಲಿ ಹೇಳಿ' ಎಂದು ಪ್ರಶ್ನಿಸಿದ.

ಈ ಮಾತು ಕೇಳಿ ಊರ ಜನರು ಪರಸ್ಪರ ಮುಖ ಮುಖ ನೋಡಿಕೊಂಡರು. ಯಾರೂ ಮುಂದೆ ಬರಲಿಲ್ಲ. ರಾಕ್ಷಸನೆಂದರೆ ಸಾಕು ಹೆದರಿ ನಡುಗುತ್ತಿದ್ದರು.

ಇದನ್ನೆಲ್ಲಾ ಸೂಕ್ಷ್ಮವಾಗಿ ಗಮನಿಸುತ್ತಿದ್ದ ಕೇವಲ ಹನ್ನೊಂದು ವರ್ಷದ ಬಾಲಕನೊಬ್ಬ ಸಭೆಯಲ್ಲಿ ಎದ್ದು ನಿಂತು 'ಮಹಾಜನಗಳೇ... ನೀವು ಒಪ್ಪುವುದಾದರೆ ನಾನು ಆ ಕಾರ್ಯವನ್ನು ಮಾಡಲು ಸಿದ್ಧ' ಎಂದಾಗ ಜನರೆಲ್ಲಾ 'ನೀನಿನ್ನೂ ಸಣ್ಣವ! ನಿನ್ನಿಂದ ಸಾಧ್ಯವಿಲ್ಲ. ತಮಾಷೆ ಮಾಡ್ಬೇಡ!' ಎಂದು ಪರಿಹಾಸ್ಯ ಮಾಡಿ ನಕ್ಕರು.

ಹೀಗೆ ಕೆಲ ದಿನ ಕಳೆದವು. ರಾಕ್ಷಸನ ಅಟ್ಟಹಾಸ ಮುಂದುವರಿದಿತ್ತು. ಇದರಿಂದ ಆ ಬಾಲಕನಿಗೆ ರಾಕ್ಷಸನನ್ನು ಸಂಹಾರ ಮಾಡಲೇಬೇಕೆಂಬ ಛಲ ಮೂಡಿತು. ಯಾರಿಗೂ ಸುಳಿವು ಹತ್ತದಂತೆ ರಾತ್ರಿ ಆ ಬಾಲಕ ನದಿಯನ್ನು ಈಜಿ ಕಾಡಿನ ರಾಕ್ಷಸನ ಗುಹೆಯತ್ತ ಬಂದಾಗ ಗಾಢ ನಿದ್ದೆಯಲ್ಲಿದ್ದ ರಾಕ್ಷಸ. ಹೆದರದೇ ಧೈರ್ಯದಿಂದ ಅಲ್ಲಿಂದ ಕಾಡಿನಲ್ಲಿ ತಪಸ್ಸು ಮಾಡುತ್ತಿದ್ದ ಮುನಿಯತ್ತ ನಡೆದ. ವಿಶಾಲವಾದ ಮರದ ಬುಡದಲ್ಲಿ ತಪೋನಿರತರಾಗಿದ್ದ. ಮುನಿಗಳು ತಮ್ಮ ದಿವ್ಯ ದೃಷ್ಟಿಯಿಂದ ಬಾಲಕ ಬಂದ ಸಂಗತಿಯನ್ನರಿತು ಮೆಲ್ಲನೆ ಕಣ್ಣು ತೆರೆದು ನೋಡಿ 'ಯಾರು ನೀನು? ಈ ಭಯಂಕರ ಕಾಡಿಗೆ ಬಂದ ಉದ್ದೇಶವೇನು?' ಎಂದು ಕರುಣೆ ತುಂಬಿದ ಧ್ವನಿಯಲ್ಲಿ ಕೇಳಿದರು.

ಬಾಲಕ 'ತಪಸ್ವಿಗಳೇ, ನಮ್ಮ ಊರಿಗೆ ನರ ರಾಕ್ಷಸನ ಹಾವಳಿಯಿಂದಾಗಿ ಜನರು ಸಂಕಷ್ಟಕ್ಕೀಡಾಗಿದ್ದಾರೆ. ಆ ರಾಕ್ಷಸನನ್ನು ಸಂಹರಿಸಲು ಸಹಾಯ ಮಾಡಿ?' ಎಂದು ಭಿನ್ನೈಸಿದ. ಬಾಲಕನ ಧೈರ್ಯ, ಪರೋಪಕಾರದ ಗುಣಕ್ಕೆ ಮೆಚ್ಚಿದ ಮುನಿಗಳು ತಮ್ಮ ತಪಸ್ಸಿನ ಪ್ರಭಾವದಿಂದ 'ಮಂತ್ರದ ಖಡ್ಗ'ವನ್ನು ಕೊಟ್ಟು 'ಹೋಗು ಈ ಖಡ್ಗದಿಂದ ರಾಕ್ಷಸನನ್ನು ಹತ ಮಾಡು' ಎಂದು ಹರಸಿದರು. ಆ ಖಡ್ಗದಿಂದ ಗುಹೆಗೆ ಬಂದು ರಾಕ್ಷಸನ ವಿರುದ್ಧ ಹೋರಾಡಿ ಕೊಂದೇ ಬಿಟ್ಟ. ಊರ ಜನರು ಸಂತಸದಿಂದ ಬಾಲಕನನ್ನು ಕೊಂಡಾಡಿದರು.



■ ಅಮರಯ್ಯಾ ಪತ್ರಿಮಠ,
ಸುರಪುರ